ಸದರೀ ದರಖಾಸ್ತುದಾರರಾದ ಜೋತೋಜೆರಾವ ವಗೈರೇರ ಅರ್ಜಿಯನ್ನು ಸ್ 1907ನೆ ಇಸವಿ ಡಿಸೆಂಬರು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟು ವೆಂಕಟರಾವ ಸಿಂಧ್ ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1907ನೆ ಇಸವಿ ಡಿಸೆಂಬರು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಸ್ 1907—08ನೆ ಇಸವಿ ಮಿ॥ ಅರ್ಜೀ ನಂಬರು 472.

ಬೆಂಗಳೂರು ಅಕ್ಕಿಪೇಟೆಲಿದ್ದು ಮೃತಪಟ್ಟ ಕೆಂಪಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಕ್ಕಿಪೇಟೆಲಿರುವ ಕೆಂಪಣ್ಣನ ಮಕ್ಕಳು 1ನೆ ಮುರಿಶ್ಯಾಮಿ, 2ನೆ ಚಿಕ್ಕವೀರಪ್ಪ, 3ನೆ ನಾರಣಪ್ಪ, 4ನೆ ಕೃಷ್ಣಪ್ಪ, ಮೃತಪಟ್ಟ ಸದರೀ ಕೆಂಪಣ್ಣನವರಿಗೆ ಬಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕೆಂಪಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 21,812—14—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮುರಿಶ್ಯಾಮಿ ವಗೈರೇರ ಅರ್ಜಿಯನ್ನು ಸ್ 1907ನೆ ಇಸವಿ ಡಿಸೆಂಬರು ತಿಂಗಳು 20ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1907ನೆ ಇಸವಿ ಡಿಸೆಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬ್ ಜಡ್ಜ.

ನೋಟಿಸ್.

ಬೆಂಗಳೂರು ತಾಲ್ಲೂಕು ದೊಡ್ಡಬಳ್ಳಾಪುರ ರೇಂಜ್ ಅಸಿಸ್ಟೆಂಟ್ ಕಮಿಷನರವರ ಆಫೀಸು.

ತಾರೀಖು 18ನೆ ನವಂಬರ್ 1907.

ನೆಲವಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಬೈಯ್ಯಂಡಹಳ್ಳಿ ಗ್ರಾಮದ ಅರ್ಧಪಾಲು ಹಿಕ್ಕೆದಾರು ಬೆಂಗಳೂರು ಚಿಕ್ಕಪೇಟೆ ಸುಮತೇಂದ್ರ ಮುತದಲ್ಲಿರುವ ಭೀಮಾಚಾರ್ರ ಸೊಸಿ ವೆಂಕೋಬಮ್ಮನವ್ರ. ಬೆಂಗಳೂರು ಯಲಹಂಕದ ಬಾಗಿಲನಲ್ಲಿ ವಾಸವಾಗಿರುವ ಹಾಗಪಾಲು ಹಿಕ್ಕೆದಾರ್ ಹುಲ್ಲಾಳು ಮಲ್ಲಿಕಾರ್ಜುನಯ್ಯನವರ ಮಗ ನಾಗಪ್ಪ ಮತ್ತು ಹಾಗಪಾಲು ಹಿಕ್ಕೆದಾರ್ ಜೈಯ್ಯಂಡಹಳ್ಳಿ ಗ್ರಾಮದ ಪುಸ್ತೂರು ಚನ್ನಪ್ಪ, ಅನುಭವದಾರ್ ಪಟೇಲ್ ಶಾಂತವೀರಪ್ಪ ಇವರಿಗೆ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ಜೋಡಿ ಗ್ರಾಮದ ಕೇಂದಿ ಹುಟ್ಟುವಳೀಲಿ ನಿಮಗೆ ಇರಬಹುದಾದ ಹಕ್ಕಿನ ವಿಚಾರವನ್ನ ಕುರಿತು ತನಿಖೆ ಕೈವು ನಡಿಯಬೇಕಾಗಿರುವದ್ದರಿಂದ ಈ ಬಗ್ಯೆ ನಿಮ್ಮಲ್ಲಿರತಕ್ಕ ವಿಶಿಷ್ಟ ದಾಖಲಾತಿಗಳ ನಿಶಿ ನೀವು ಪ್ರತಿಬ್ಬರು 1908ನೆ ಇಸವಿ ಜನವರಿ 4ನೆ ತಾರೀಖು ದಿವಿ 11ಕ್ಕೆ ಬೆಂಗಳೂರು ಪೊಕ್ಕಾಂ ಈ ಕೋರ್ಟ್ ರೂಬರೂಬ್ ಹಾಜರಾಗಬೇಕು. ಇದಕ್ಕೆ ತಪ್ಪಿದರೆ ನಿಮ್ಮ ತಕರಾರು ಅಂಗೀಕರಿಸದೆ ಏಕಪಕ್ಷವಾಗಿ ನಿಮಗೆ ಈ ಬಾಬಿನಲ್ಲಿ ಬರತಕ್ಕದ್ದೇನೂ ಇಲ್ಲವೆಂದು ನಿರ್ಣಯಿಸಲ್ಪಡುತ್ತೆ ತಿಳಿಯುವದು.

ಟಿ. ಚೊಕ್ಕಣ್ಣ, ಅಸಿಸ್ಟೆಂಟ್ ಕಮಿಷನರ್.

ಅಮೃತಮಹಲ್ ಇಲಾಖಾ.

ಪ್ರಕಟನೆ.

ಪೊಕ್ಕಾಂ ಹೊಳಲ್ಕೆರೆ, ತಾರೀಖು 25—27ನೆ ನವಂಬರ್ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷನ್ ಬಳಿಯಲ್ಲೂ ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುದ್ದದ ಪೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನು ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರಿಂಟಿಂಡೆಂಟ್.